ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.3085/2023

| | | | |
|---|---|---|---|
| ಹೆಸರು | : | ನಾಗರಾಜು ಸಿ ಆರ್ | ಸಿ .ಡಬ್ಲ್ಯೂ :2 |
| ತಂದೆ ಹೆಸರು | : | ಸಿ ಎಸ್ ರಾಮಚಂದ್ರಯ್ಯ | ಪಿ .ಡಬ್ಲ್ಯೂ :2 |
| ವಯಸ್ಸು | : | 62 ವರ್ಷ | |
| ಉದ್ಯೋಗ | : | ನಿವೃತ ಪ್ರಥಮ ದರ್ಜೆ ಸಹಾಯಕರು , ತಾಲ್ಲೂಕು ಕಚೇರಿ ಗುಬ್ಬಿ | |
| ವಾಸಸ್ಥಳ | : | ಗುಬ್ಬಿ | |

ಸಾಕ್ಷಿಯನ್ನು ದಿಃ 09-12-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

2017 ರಿಂದ ಮೇ 2023 ರಲ್ಲಿ ನಿವೃತ್ತಿಯಾಗುವವರೆಗೆ ಗುಬ್ಬಿಯ ತಾಲ್ಲೂಕು ಕಂದಾಯ ಇಲಾಖೆಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

1 ರಿಂದ 4 ನೇ ಆರೋಪಿತರುಗಳು ಗೊತ್ತು . ಚಾಸಾ -1 ಗೊತ್ತು . ಚಾಸಾ -1 ರವರು ದಿಃ 12-01-2023 ರಂದು ಗುಬ್ಬಿ ತಾಲ್ಲೂಕಿನ ಅವ್ವೇರಹಳ್ಳಿ ಗ್ರಾಮದ ನರಸಿಂಹಸ್ವಾಮಿ ದೇವಸ್ಥಾನದ ಅರ್ಚಕರ ಅಧಿಕಾರ ಹಸ್ತಾಂತರಿಸಿ ಬಂದಿದ್ದರು . ಸದರಿ ವಿಚಾರವಾಗಿ ದಿಃ 13-01-2023 ರಂದು ಮಧ್ಯಾಹ್ನ 3.25 ರ ಸಮಯದಲ್ಲಿ 1 ನೇ ಆರೋಪಿತರು ತಮ್ಮ ಹಿಂಬಾಲಕರಾದ 2 ರಿಂದ 4 ನೇ ಆರೋಪಿತರೊಡನೆ ನಮ್ಮ ಕಚೇರಿಯ ಬಳಿ ಬಂದಿದ್ದರು . ಚಾಸಾ -1 ರವರೊಡನೆ ಅವರುಗಳು ಮಹಜರಿನ ಪ್ರತಿ ನೀಡಬೇಕೆಂದು ಗಲಾಟೆ ಮಾಡುತ್ತಿದ್ದರು . ಆ ಸಮಯ ಚಾಸಾ -1 ರವರು ದಾಖಲೆಯ ಪ್ರತಿ ನೀಡಲು ಇಲಾಖೆಯಲ್ಲಿ ಸೂಕ್ತ ಕ್ರಮಗಳು ಇವೆ ಆ ಮೂಲಕ ದಾಖಲೆ ಪಡೆದುಕೊಳ್ಳಿ ಎಂದು ಹೇಳುತ್ತಿದ್ದರು . ಆರೋಪಿತರುಗಳು ಏರು ಧ್ವನಿಯಲ್ಲಿ ಮಾತನಾಡಿದರು . ಅವರುಗಳು ಹಾಗೂ ಚಾಸಾ -1 ರವರ ನಡುವೆ ವಾಗ್ವಾದ ನಡೆಯಿತು . ಆ ಸಮಯ ಅದೇ ಕಚೇರಿಯಲ್ಲಿ ನಾನು , ಚಾಸಾ -3 ರಿಂದ 5 ರವರು ಗಲಾಟೆ ಬಿಡಿಸಿದೆವು . ಆರೋಪಿತರುಗಳು ಕಚೇರಿಗೆ ಬಂದು ಗಲಾಟೆ ಮಾಡಿದ್ದರಿಂದ ನಮ್ಮ ಸರ್ಕಾರಿ ಕೆಲಸಕ್ಕೆ ತೊಂದರೆಯಾಯಿತು . ಮೇಲಿನ ವಿಚಾರಗಳನ್ನು ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ .

ಆರೋಪಿತರುಗಳು ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.